ವಿವರ ಈ ಕೆಳಗಿನಂತಿದೆ.

(ಮೊತ್ತ ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ವರ್ಷ	ಮಂಜೂರಾತಿ	
		ಸಂಖ್ಯೆ	ಮೊತ್ತ
1.	1996-97	24	9.56
2.	1997-98	22	8.79
	ಒಟ್ಟು	**46**	**18.35**

ಅ) ಸದರಿ ಅಭ್ಯರ್ಥಿಗಳಲ್ಲಿ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಸಂಖ್ಯೆ 25. ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಸಾಲ ಸೌಲಭ್ಯವನ್ನು ನಿರಾಕರಿಸುತ್ತಿಲ್ಲ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಉಡುಪಿ ಶಾಖಾ ಕಛೇರಿಗೆ ಅರ್ಜಿದಾರರುಗಳು ನಿಯಮಗಳಿಗನುಸಾರ ಮಾಹಿತಿ ಒದಗಿಸಿ ಸಾಲದ ಅರ್ಜಿಗಳನ್ನು ಸಂಸ್ಥೆಯ ಶಾಖೆಯಿಂದ ಪಡೆದು ಸಾಲಪಡೆಯುವಂತೆ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗೆ ಎಲ್.ಓ.ಸಿ. ಬಿಡುಗಡೆ

826 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಆಗಿರುವ ಲೋಕೋಪಯೋಗಿ ಇಲಾಖೆ ಕಾಮಗಾರಿಗೆ 1998ನೇ ಮಾರ್ಚ್ ತಿಂಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಿರುತ್ತದೆ? ಇನ್ನು ಸರ್ಕಾರ ಕೊಡಲು ಬಾಕಿಯಿರುವ ಹಣ ಎಷ್ಟು?

ಆ) ಇಷ್ಟು ಕಡಿಮೆ ಹಣ ಪಾವತಿ ಮಾಡಿದ್ದಲ್ಲಿ ಕಂಟ್ರಾಕ್ಟ್‌ದಾರರು ಕೆಲಸ ಮಾಡಲು ಹಿಂಜರಿಯುವುದಿಲ್ಲವೆ; ಈ ಬಗ್ಗೆ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) 268.95 ಲಕ್ಷ ರೂ.ಗಳು ಮಾರ್ಚ್ ತಿಂಗಳಲ್ಲಿ ಬಿಡುಗಡೆ ಮಾಡಲಾಗಿದೆ ಹಾಗೂ 1192.45 ಲಕ್ಷ ರೂ.ಗಳು ಹಣ ಬಾಕಿ ಇರುತ್ತದೆ.

ಆ) ಅನುದಾನಕ್ಕೆ ತಕ್ಕಂತೆ, ಹಣ ಪಾವತಿ ಮಾಡುವುದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ. 1998-99ನೇ ಸಾಲಿನಲ್ಲಿ ಹಂತ ಹಂತವಾಗಿ ಬಾಕಿ ಬಿಲ್ಲುಗಳನ್ನು ತೀರುವಳಿ ಮಾಡಲಾಗುವುದು.